ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ

ಉತ್ತರ ಕನ್ನಡ ಜಿಲ್ಲೆ, ಕಾರವಾರ – 581 301

DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301

ದೂರವಾಣಿ : 08382 221170
Telephone: 08382 221170
Email: itstaffdudckarwar@gmail.com

ನಂ. ಡಿಯುಡಿಸಿ: ಕೋವಿಡ್-19 ಕರೋನಾ ವೈರಸ್: ವಿವ : 2019-20 ದಿನಾಂಕ: 25-03-2020

**ತುರ್ತು ಕ್ರಮ**

ರಿಗೆ,
ಪೌರಾಯುಕ್ತರು,
ನಗರಸಭೆ, ಕಾರವಾರ, ದಾಂಡೇಲಿ ಮತ್ತು ಶಿರಸಿ,
ಮುಖ್ಯಾಧಿಕಾರಿ,
ಪುರಸಭೆ, ಅಂಕೋಲಾ, ಕುಮಟಾ, ಭಟ್ಕಳ ಮತ್ತು ಹಳಿಯಾಳ
ಮುಖ್ಯಾಧಿಕಾರಿ,
ಪಟ್ಟಣ ಪಂಚಾಯತ್, ಹೊನ್ನಾವರ, ಜಾಲಿ, ಸಿದ್ದಾಪುರ,
ಯಲ್ಲಾಪುರ ಮತ್ತು ಮುಂಡಗೋಡ

ವಿಷಯ:- ತರಕಾರಿ, ಹಣ್ಣು, ದಿನಸಿ, ಪ್ಯಾಕ್ಡ್ ನೀರು ಮತ್ತು ಇತ್ಯಾದಿ ಮಾನವನು ಜೀವಿಸಲು ಬೇಕಾಗುವ ಅತ್ಯಾವಶ್ಯಕ ಆಹಾರ ಸಾಮಗ್ರಿಗಳನ್ನು ಮನೆ ಮನೆಗೆ ಸರಬರಾಜು ಮಾಡುವ ಕುರಿತು.

******

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕೋವಿಡ್-19 ಕರೋನಾ ವೈರಸ್ ಸಾಂಕ್ರಾಮಿಕವಾಗಿ ಹರಡುವಿಕೆಯನ್ನು ತಡೆಗಟ್ಟುವ ಬಗ್ಗೆ ದಿನಾಂಕ: 25-03-2020 ರಿಂದ 14-04-2020 ರ ವರೆಗೆ ಸಂಪೂರ್ಣ ಭಾರತ ದೇಶವು ಲಾಕ್‌ಡೌನ್ ಘೋಷಣೆ ಮಾಡಿರುವುದರಿಂದ ಸಾರ್ವಜನಿಕರು ರಸ್ತೆಯಲ್ಲಿ ಓಡಾಡಲು ಅವಕಾಶ ಇರುವುದಿಲ್ಲ. ಆದ್ದರಿಂದ ಅತ್ಯಾವಶ್ಯಕವಾಗಿ ಬೇಕಾಗುವ ದಿನಸಿ ತರಕಾರಿ, ಹಣ್ಣು, ಪ್ಯಾಕ್ಡ್ ನೀರು ಮೊಟ್ಟೆ, ಇತ್ಯಾದಿ ಆಹಾರ ಸಾಮಗ್ರಿಗಳನ್ನು ವಾರ್ಡ್ ಮಟ್ಟದಲ್ಲಿ ಪ್ರತಿ ಮನೆ ಮನೆಗಳಿಗೆ ಸರಬರಾಜು ಮಾಡಬೇಕಾಗಿರುತ್ತದೆ. ಆದ್ದರಿಂದ ನಗರ ಸ್ಥಳೀಯ ಸಂಸ್ಥೆಯ ವಾಹನ ಅಥವಾ ಖಾಸಗಿ ವಾಹನ ಈ ಕಾರ್ಯಕ್ಕೆ ಬಳಸಿಕೊಳ್ಳತಕ್ಕದ್ದು. ಸದರ ವಾಹನಕ್ಕೆ ಧ್ವನಿ ವರ್ಧಕ ಅಳವಡಿಸುವುದು. (ತರಕಾರಿ ಮತ್ತು ಹಣ್ಣು ಹಂಪಲಗಳನ್ನು ತಳ್ಳುವ ಗಾಡಿಯ ಮೂಲಕ ಅವಕಾಶವಿದ್ದಲ್ಲಿ ಮಾಡಬಹುದಾಗಿದೆ) ಈ ಕಾರ್ಯಕ್ಕೆ ಬರುವ ವೆಚ್ಚವನ್ನು ವ್ಯಾಪಾರಸ್ಥರು ಭರಿಸಿಕೊಳ್ಳತಕ್ಕದ್ದು. ಹಾಗೂ ಪ್ರತಿ ವಾರ್ಡಗಳಿಗೆ ಅವಶ್ಯಕ ಆಹಾರ ಸಾಮಗ್ರಿಗಳನ್ನು ಪ್ರತಿ ದಿನ ಅಥವಾ ಎರಡು ದಿನಕ್ಕೊಮ್ಮೆ ಸರಬರಾಜು ಮಾಡತಕ್ಕದ್ದು. ವಾಹನಕ್ಕೆ ತುರ್ತು ಆಹಾರ ಸಾಮಗ್ರಿ ಮನೆ ಮನೆಗೆ ಸರಬರಾಜು ಮಾಡುವ ವಾಹನ ಅಂತಾ ನಾಮಫಲಕ ಅಳವಡಿಸತಕ್ಕದ್ದು. ಹಾಗೂ ವಾಹನದ ಒಂದು ಬದಿಯಲ್ಲಿ

ಸಾಮಗ್ರಿಗಳ ದರಗಳ ಪಟ್ಟಿಯನ್ನು ಅಳವಡಿಸತಕ್ಕದ್ದು. ಹಾಗೂ ವಾಹನ ಚಾಲಕರು ಮತ್ತು ಮಾಲಕರಿಗೆ ಗುರುತಿನ ಚೀಟಿಯನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯಿಂದ ನೀಡತಕ್ಕದ್ದು. ಈ ಮೇಲಿನ ಕಾರ್ಯದ ಉಸ್ತುವಾರಿಯನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆ ಮುಖ್ಯಸ್ಥರು ನೇರವಾಗಿ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು, ಹಾಗೂ ಈ ಕುರಿತು ಪ್ರತಿದಿನ ಜಿಲ್ಲಾ ನಗರಾಭಿವೃದ್ಧಿ ಕೋಶಕ್ಕೆ ಮಾಹಿತಿಯನ್ನು ನೀಡುವುದು ಅಲ್ಲದೇ ಸಾರ್ವಜನಿಕರು ರಸ್ತೆಯ ಮೇಲೆ ಓಡಾಡದಂತೆ ಪೋಲಿಸ್ ಇಲಾಖೆಯವರೊಂದಿಗೆ ಸಹಕರಿಸಿ ಕ್ರಮವನ್ನು ಕೈಕೊಳ್ಳಲು ತಿಳಿಸಿದೆ. ನಗರ ಪ್ರದೇಶದಲ್ಲಿ ಯಾವುದೇ ರೀತಿಯ ಅಂಗಡಿಗಳನ್ನು ತೆರೆಯದಂತೆ (**ಔಷಧಿ ಅಂಗಡಿ ಹೊರತುಪಡಿಸಿ**) ಅಥವಾ ಬೀದಿ ಬದಿ ವ್ಯಾಪಾರ ಮಾಡದಂತೆ ಕ್ರಮ ಕೈಗೊಳ್ಳಲು ಈ ಮೂಲಕ ತಿಳಿಸಿದೆ. ಹಾಗೂ ಪ್ರತಿಯೊಬ್ಬರಿಗೂ ಬೇಕಾಗುವ ಆಹಾರ ಸಾಮಗ್ರಿಗಳನ್ನು ಸಿಗುವಂತೆ ನೋಡಿಕೊಳ್ಳತಕ್ಕದ್ದು. ಸಂಬಂಧಪಟ್ಟ ಎಲ್ಲರೂ ಈ ಕ್ರಮವನ್ನು ಚಾಚು ತಪ್ಪದೇ ಕಟ್ಟುನಿಟ್ಟಾಗಿ ಪಾಲಿಸಲು ಕೋರಿದೆ.

ಅಪರ ಜಿಲ್ಲಾಧಿಕಾರಿ ಹಾಗೂ ಯೋಜನಾ ನಿರ್ದೇಶಕರು,
ಜಿಲ್ಲಾಧಿಕಾರಿ ಕಚೇರಿ, ಉತ್ತರ ಕನ್ನಡ, ಕಾರವಾರ

ಪ್ರತಿ :

1) ಮಾನ್ಯ ಪೋಲೀಸ್ ಅಧೀಕ್ಷಕರು, ಉತ್ತರ ಕನ್ನಡ ಕಾರವಾರರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಸಹಾಯಕ ಕಮೀಷನರ್, ಉಪ-ವಿಭಾಗ, ಕಾರವಾರ, ಭಟ್ಕಳ, ಕುಮಟಾ ಮತ್ತು ಶಿರಸಿ
3) ತಹಶೀಲ್ದಾರ್, ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ ಮತ್ತು ದಾಂಡೇಲಿ
4) ಉಪ-ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಕಾರವಾರ
   2/- ಯಾವುದೇ ಸಾಮಗ್ರಿಗಳ ಕೊರತೆಯಾಗದಂತೆ ನೋಡಿಕೊಳ್ಳತಕ್ಕದ್ದು.
5) ಪ್ರಾದೇಶಿಕ ಸಾರಿಗೆ ಅಧಿಕಾರಿ, ಕಾರವಾರ, ಹೊನ್ನಾವರ, ಶಿರಸಿ ಮತ್ತು ದಾಂಡೇಲಿ ಮಾಹಿತಿಗಾಗಿ